29.	ಶ್ರೀ ಮಂಗಳಾದೇವಿ ದೇ: ಬೋಳಾರ	22,26,767-00
30.	ಶ್ರೀ ಯೋಗೀಶ್ವರ ಮಠ ದದ್ರಿ	12,56,557-00
31.	ಶ್ರೀ ಹೊಸಮಾರಿ ಗುಡಿ, ಕಾಪು	11,94,519-00
32.	ಶ್ರೀ ಹಳೇ ಮಾರಿ ಗುಡಿ, ಕಾಪು	10,28,487-00
33.	ಶ್ರೀ ಮಹಿಷ ಮರ್ಧಿನಿ ಗುಡಿಕಾಪು	11,90,138-00
34.	ಶ್ರೀ ಕೃಷ್ಣಾವರ ಮಠ ಉಡುಪಿ	20,29,872-00
35.	ಶ್ರೀ ಪುತ್ತಿಗೆ ಮಠ, ಉಡುಪಿ	13,32,691-00
36.	ಶ್ರೀ ಕಣಿಯೂರು ಮಠ, ಉಡುಪಿ	12,04,060-00
37.	ಶ್ರೀ ಲಕ್ಷ್ಮೀವೆಂಕಟೇಶ್ವರ ದೇ: ಬೆಡಗಬೆಟ್ಟು, ಉಡುಪಿ	10,51,204-00
38.	ಶ್ರೀ ಗುರುನರಸಿಂಹ ದೇ : ಸಾಲಿಗ್ರಾಮ	11,10,222-00
39.	ಶ್ರೀ ಮಹಾಲಿಂಗೇಶ್ವರ ದೇ: ಪಕ್ಕಂದ್ರಿ	13,80832-00
40.	ಶ್ರೀ ಅನಂತೇಶ್ವರ ಮತ್ತು ಚಂದ್ರಮೌಳೇಶ್ವರ ದೇ: ಉಡುಪಿ	14,36,959-00
41.	ಶ್ರೀ ವೆಂಕಟರಮಣ ದೇ: ಕುಂಪಾಪುರ	11,50,603-00
42.	ಶ್ರೀ ಬ್ರಹ್ಮ ದುರ್ಗಾಪರವೇಶ್ವರಿದೇ: ಕಮಲಶಿಲೆ, ಕುಂದಾಪುರ ತಾ:	13,92,012-00
43.	ಶ್ರೀ ತರುಮಲ ವೆಂಕಟರಮಣ ದೇ: ಬಂಟ್ವಾಳ	18,87,464-00
44.	ಶ್ರೀ ಸಹಸ್ರಲಿಂಗೇಶ್ವರ ದೇ: ಉಪ್ಪಿನಂಗಡಿ	11,99,692-00
45.	ಶ್ರೀ ಮಹಾಲಿಂಗೇಶ್ವರ ದೇ: ಪುತ್ತೂರು	16,88,868-00

ಕೊಳಚೆ ಪ್ರದೇಶದಲ್ಲಿರುವ ಕುಟುಂಬಗಳಿಗೆ ವಸತಿ ಸೌಕರ್ಯ

148 (249) ಶ್ರೀ ಬಿ. ಎಸ್. ಯಡಿಯೂರಪ್ಪ, (ಶಿಕಾರಿಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಗುರ್ತಿಸಿರುವ ಕೊಳಚೆ ಪ್ರದೇಶಗಳೆಷ್ಟು?

ಆ) ಅವುಗಳಲ್ಲಿ ಕುಟುಂಬಗಳೆಷ್ಟು?

ಇ) ಅವುಗಳಲ್ಲಿ ಎಷ್ಟು ಕುಟುಂಬಗಳಿಗೆ ಇಲ್ಲಿಯವರೆಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆ?

ಈ) ರಾಜ್ಯದ ಯಾವ ಯಾವ ನಗರದಲ್ಲಿ ಎಷ್ಟು ಎಷ್ಟು ವಸತಿ ನಿರ್ಮಿಸಲಾಗುವುದು?

ಉ) ಉಳಿದ ಕುಟುಂಬಗಳಿಗೆ ವಸತಿ ಸೌಕರ್ಯ ಕಲ್ಪಿಸಲು ಸರ್ಕಾರದ ಯೋಜನೆ ಏನು? (ಪ್ರತಿ ನಗರಸಭೆವಾರು ವಿವರವಾದ ಮಾಹಿತಿಯನ್ನು ಒದಗಿಸುವುದು)

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ರಾಜ್ಯದಲ್ಲಿ ಮಂಡಳಿಯ ವತಿಯಿಂದ ಇಲ್ಲಿಯವರೆಗೆ ಗುರ್ತಿಸಿರುವ ಒಟ್ಟು 1871 ಕೊಳಚೆ ಪ್ರದೇಶಗಳಿರುತ್ತವೆ

ಆ) ಈ ಕೊಳಚೆ ಪ್ರದೇಶಗಳಲ್ಲಿ ಸುಮಾರು 3, 18, 463 ಕುಟುಂಬಗಳು ವಾಸಿಸುತ್ತಿರುವುದಾಗಿ ಅಂದಾಜು ಮಾಡಲಾಗಿದೆ.

ಇ) ಮಂಡಳಿಯ 1982-83ನೇ ಸಾಲಿನಲ್ಲಿ 1998ರ ಫೆಬ್ರವರಿ ಅಂತ್ಯದವರೆಗೆ 19827 ವಸತಿ ಗೃಹಗಳನ್ನು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಅರ್ಹ ಫಲಾನುಭವಿಗಳಿಗಾಗಿ ಕಟ್ಟಿಸಲಾಗಿದೆ.

ಈ) ಪ್ರಸಕ್ತ 1997-98ನೇ ಸಾಲಿನಲ್ಲಿ ಒಟ್ಟು 6225 ವಸತಿ ಗೃಹಗಳನ್ನು ರಾಜ್ಯ ವತಿಯಿಂದ ಅನುದಾನದ ಜೊತೆಗೆ ಹುಡ್ಕೋ ಸಂಸ್ಥೆಯ ಸಾಲದ ನೆರವಿನೊಂದಿಗೆ ಪ್ರಾರಂಭಿಸಲು ಯೋಜಿಸಿದೆ ಈ ಪೈಕಿ 2679 ಮನೆಗಳಿಗೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಅಂದಾಜು ಪಟ್ಟಿ ತಯಾರಿಸಿ ಸರ್ಕಾರಕ್ಕೆ ಆಡಳಿತಾತ್ಮಕ ಮಂಜೂರಾತಿಗಾಗಿ ಶೀಘ್ರದಲ್ಲೇ ಸಲ್ಲಿಸಲಿದೆ. ಹಾಗೂ ಉಳಿದ 1777 ಮನೆಗಳಿಗೆ ಸ್ಥಳ ಲಭ್ಯತೆ ಧರಿಸಿ ಮುಂದಿನ ಕ್ರಮ ಕೈಗೊಳ್ಳಬೇಕಾಗಿದೆ.

ಉ) ಮಂಡಳಿಯ ಘೋಷಿತ ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ಸ್ಥಳ ಲಭ್ಯತೆ ಹಾಗೂ ಸರ್ಕಾರ ಆಯವ್ಯಯದಲ್ಲಿ ಮಂಡಳಿಗೆ ಒದಗಿಸುವ ಅನುದಾನ ಧರಿಸಿ ಆಯ್ದ ಕೊಳಚೆ ಪ್ರದೇಶಗಳಲ್ಲಿ ಆದ್ಯತೆಯ ಮೇರೆಗೆ ಹುಡ್ಕೋ ಸಂಸ್ಥೆಯ ಸಾಲವು ಸೇರಿದಂತೆ ಹಂತಹಂತವಾಗಿ ಮುಂದಿನ ಕೆಲವಾರು ವರ್ಷಗಳಲ್ಲಿ ವಸತಿ ಗೃಹಗಳನ್ನು ನಿರ್ಮಿಸಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ಬೆಳೆ ವಿಮಾ ಯೋಜನೆ

149 (250) ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯಲ್ಲಿ 1996-97ರ ಮುಂಗಾರು ಹಂಗಾಮಿನಲ್ಲಿ ತಾಲ್ಲೂಕುವಾರು ರೈತರಿಗೆ ಯಾವ ಯಾವ ಬೆಳೆಗೆ ಎಷ್ಟು ವಿಮಾ ಪರಿಹಾರ ಕೊಡಲಾಗಿದೆ.

ಆ) ಧಾರವಾಡ ಜಿಲ್ಲೆಯಲ್ಲಿ (ಹಾವೇರಿ, ಗದಗ್ ನೂತನ ಜಿಲ್ಲೆಗಳನ್ನು ಕೂಡಿ) 1997-98ರ ಮುಂಗಾರಿ ಹಂಗಾಮಿನಲ್ಲಿ ಬೆಳೆ ವಿಮೆ ಯೋಜನೆಗೆ ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಬೆಳೆಗೆ ವಿಮಾ ಯೋಜನೆಯ ಲಾಭ ದೊರಕಲಿದೆ. ತಾಲ್ಲೂಕುವಾರು ದೊರಕಲಿರುವ ವಿಮಾ ಹಣ ಎಷ್ಟು ಈಗ ಯಾವ ಹಂತದಲ್ಲಿದೆ.

ಸಿ. ಬೈರೇಗೌಡ, (ಕೃಷಿ ಸಚಿವರು) :

ಅ) 1997-98ರ ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳಿಗೆ ಒಳಗೊಳ್ಳುವ ತಾಲ್ಲೂಕುಗಳು ಈ ಕೆಳಕಂಡಂತಿವೆ : (ಹಾವೇರಿ, ಗದಗ ಜಿಲ್ಲೆಗಳು ಸೇರಿ)